.R.P.67

Form No.4 (Civil)
Deposition Sheets
(R.P.No.57)

# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

## ಎಸ್.ಸಿ. ನಂ.39/2021

ದಿನಾಂಕಃ 06.09.2022 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:5 ಪಿ. ಡಬ್ಲ್ಯೂ:5

| | |
|---|---|
| ಸಾಕ್ಷಿದಾರರ ಹೆಸರು | ಜಯಣ್ಣ |
| ತಂದೆಯ ಹೆಸರು | ಚಿಕ್ಕಸಣ್ಣಯ್ಯ |
| ವಯಸ್ಸು | 60 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಚಾಮುಂಡೇಶ್ವರಿ ನಗರ, ಮಂಡ್ಯ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನ್ಯಾಯಾಲಯದ ಮುಂದೆ ಇರುವ ಎಲ್ಲಾ ಆರೋಪಿರು ಗೊತ್ತು. ಆರೋಪಿತರು ನಮ್ಮ ಊರಿನವರು. 3 ನೇ ಆರೋಪಿ ಸಿದ್ದಪ್ಪ ಗೊತ್ತು. 8 ನೇ ಆರೋಪಿ ಚಿಕ್ಕವೀರಭದ್ರ ಗೊತ್ತಿಲ್ಲ, ಅವರು ಬೆಂಗಳೂರಿನವರು. ಚಾಸಾ.1 ರಿಂದ 4 ಗೊತ್ತು. ಚಾಸಾ.6 ರವರು, ಚಾಸಾ.2 ರವರ ಹೆಂಡತಿ ಆಗಬೇಕು. ನಾನು ವ್ಯವಸಾಯ ಆರಂಭ ಮಾಡುತ್ತೇನೆ. ಇದರ ಜೊತೆಗೆ ಮನೆ ಕಟ್ಟುವವರಿಗೆ ಎಂಸ್ಯಾಂಡಿನ ಡಸ್ಟ್ ಮತ್ತು ಜಲ್ಲಿ ಲೋಡನ್ನು ಹೊಡೆಸುತ್ತೇನೆ. ಆರೋಪಿತರು ಮಂಡ್ಯದಲ್ಲಿ ಇರುವ ಮರಿಗೌಡ ಬಡಾವಣೆಯ 2 ನೇ ಕ್ರಾಸ್ ನಲ್ಲಿ ವಾಸವಿರುತ್ತಾರೆ. ಚಾಸಾ.1, 2 ಮತ್ತು 6 ರವರೂ ಸಹಾ ಮರಿಗೌಡ ಬಡಾವಣೆಯ ಆರೋಪಿತರ ಮನೆಯ ಅಕ್ಕಪಕ್ಕದಲ್ಲಿ ವಾಸವಿದ್ದಾರೆ. ಈಗ ನನಗೆ ತೋರಿಸಿದ 4 ಫೋಟೋದಲ್ಲಿ ಚಾಸಾ.2 ಇದ್ದಾರೆ. ಈಗ ನನಗೆ ತೋರಿಸಿದ ಬೇರೆ 2 ಫೋಟೋದಲ್ಲಿ ಚಾಸಾ.2 ಸ್ವಾಮಿರವರ ಮಗ ಚಾಸಾ.1 ಇದ್ದಾರೆ . ಸದರಿ ಫೋಟೋಗಳಿಗೆ ಸಂಬಂಧಪಟ್ಟಿರುವ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ದೃಢೀಕರಣ ಪತ್ರ ಕಡತದಲ್ಲಿ ಲಭ್ಯ ಇರುವುದಿಲ್ಲ, ಆದ್ದರಿಂದ ಆರೋಪಿತರ ವಕೀಲರು , ಫೋಟೋಗಳನ್ನು ನಿಶಾನೆಯಾಗಿ ಗುರುಪಡಿಸಲು ಆಕ್ಷೇಪಣೆ ಮಾಡಿರುತ್ತಾರೆ. ಆದ್ದರಿಂದ ಫೊಟೋಗಳನ್ನು ನಿಶಾನೆಯಾಗಿ

ಗುರುತಿಸಿರುವುದಿಲ್ಲ. ಸದರಿ ಫೋಟೋದಲ್ಲಿ ಇರುವ ವ್ಯಕ್ತಿಗೆ ಹೊಡೆದು ಗಾಯಗಳು ಆಗಿವೆ. ಸದರಿ ಘಟನೆ ನಡೆದು ಈ ತಿಂಗಳು ಮುಗಿದರೆ 2 ವರ್ಷ ಆಗುತ್ತದೆ. 2 ನೇ ಮರಿಗೌಡ ಬಡಾವಣೆಯಲ್ಲಿ ಬೆಳಗ್ಗೆ 9.30 ಗಂಟೆ ಸಮಯದಲ್ಲಿ ಚಾಸಾ.2 ರವರ ಮನೆಯ ಹತ್ತಿರ ಗಲಾಟೆಯಾಗುತ್ತಿತ್ತು. ನಾನು ಆಸ್ಪತ್ರೆ ಹತ್ತಿರ ಅದೇ ರಸ್ತೆಯಲ್ಲಿ ನಿಂತಿದ್ದೆನು. ಚಾಸಾ.2 ರವರ ಮನೆಯ ಹತ್ತಿರ ಜನ ತುಂಬಿರುವುದನ್ನು ನೋಡಿ ಅಲ್ಲಿಗೆ ಓಡಿ ಬಂದೆ. ಒಬ್ಬರಿಗೊಬ್ಬರು ಗಲಾಟೆ ಮಾಡುತ್ತಿದ್ದಾಗ ಶಂಕರ ಎಂಬುವರು ಮನೆಯ ಮೇಲೆ ನಿಂತಿದ್ದರು. ಶಂಕರ ಎಂಬುವರು ಕಲ್ಲನ್ನು ಚಾಸಾ.2 ರವರ ಮೇಲೆ ಎತ್ತಿ ಹಾಕಿದರು. ಶಂಕರ, ಚಾಸಾ.2 ರವರ ಮನೆಯ ಮೇಲೆ ನಿಂತಿದ್ದರು. ಸ್ವಾಮಿ ಮತ್ತು ಅವರ ಮಗ ತಿರುಮಲ ಕೆಳಗಡೆ ನಿಂತಿದ್ದರು. ಕಲ್ಲು ಚಾಸಾ.2 ಸ್ವಾಮಿ ತಲೆ ಮೇಲೆ ಬಿತ್ತು, ಸ್ವಾಮಿ ಕೆಳಗಡೆ ಬಿದ್ದು ಹೋದರು. ಆಗ ಶಂಕರ ಮೇಲಿಂದ ಕೆಳಗೆ ಇಳಿದು ಬಂದು 2 ನೇ ಆರೋಪಿ ಶ್ರೀನಿಧಿ ಕೈಯಿಂದ ಕೋಲನ್ನು ಕಿತ್ತುಕೊಂಡು , ಸ್ವಾಮಿಗೆ 2-3 ಏಟುಗಳನ್ನು ಮತ್ತೆ ಹೊಡೆದರು. ಸ್ಥಳದಲ್ಲಿ ಭಾಗ್ಯ, ಗೀತಾ, ಲಕ್ಷ್ಮಿ, ಪುಟ್ಟೀರಮ್ಮ ಸಹಾ ಇದ್ದರು. ಇವರು ಕುಡುಲುಗಳನ್ನು ಹಿಡಿದುಕೊಂಡಿದ್ದರು, ಭಯಕ್ಕೆ ನಾನು ಹತ್ತಿರ ಹೋಗಲಿಲ್ಲ. ತಿರುಮಲ ರವರಿಗೂ ಸಹಾ 2-3 ಏಟು ಬಿದ್ದು ಗಾಯಗಳಾಗಿತ್ತು. ಅವರ ಕೈಗೆ ಮತ್ತು ಕಿವಿ ಬಳಿ ಏಟಾಗಿತ್ತು. ಜನ ಒಬ್ಬರಿಗೊಬ್ಬರು ಹೊಡೆಯುತ್ತಿದ್ದರು, ಯಾರು ಹೊಡೆಯುತ್ತಿದ್ದರು ಅಂತ ಗೊತ್ತಾಗಲಿಲ್ಲ. ತಿರುಮಲನಿಗೆ ಕುಡುಗೋಲಿನಿಂದ ಹೊಡೆದಿದ್ದಾರೆ. ಸ್ಥಳದಲ್ಲಿ ಶರತ್, ರಾಘು ಹಾಗೂ ಇನ್ನು ಯಾರ್ಯರೋ ಇದ್ದರು. ಸ್ವಾಮಿ ಮತ್ತು ತಿರುಮಲರವರನ್ನು ನಾನು, ಶರತ್ ಮತ್ತು ಜಯಣ್ಣ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಾವು ಮತ್ತು ಅಕ್ಕಪಕ್ಕದ ಜನರು ಸ್ವಾಮಿ ಬದುಕುವುದಿಲ್ಲ, ಸತ್ತು ಹೋಗುತ್ತಾನೆ ಅಂತ ಅಳುತ್ತಿದ್ದೆವು, ಆದ್ದರಿಂದ ಗಾಬರಿಯಲ್ಲಿ ಸ್ವಾಮಿಯನ್ನು ನಾವೆಲ್ಲ ಸೇರಿಕೊಂಡು ಆಸ್ಪತ್ರೆಗೆ ಎತ್ತಿಕೊಂಡು ಹೋದೆವು.

ಜಮೀನು , ಆಸ್ತಿಗೋಸ್ಕರ ಅವರಲ್ಲಿ ಆಗಾಗ ಜಗಳ ಮಾಡುತ್ತಿದ್ದರು. ಸ್ವಾಮಿ ನನ್ನ ಬಳಿ, ಹೀಗೇಗೆ ಜಗಳ ಆಗುತ್ತಿದೆ, ಆಸ್ತಿಗೋಸ್ಕರ ನಾನು ಕೋರ್ಟಿಗೆ ಹೋಗುತ್ತೇನೆ ಅಂತ ಹೇಳುತ್ತಿದ್ದೆನು. ಶಂಕರ, ಸ್ವಾಮಿಯನ್ನು ಸಾಯಿಸಿಬಿಟ್ಟರೆ ಇವನು ಏನು ಆಸ್ತಿಯನ್ನು ಈಸಿಕೊಳ್ಳುತ್ತಾನೆ ಎಂಬ ಕಾರಣಕ್ಕೆ ಕಲ್ಲನ್ನು ಸ್ವಾಮಿ ತಲೆ ಮೇಲೆ ಎತ್ತಿಹಾಕಿದರು. ಸದರಿ ದಿಂಡುಗಲ್ಲನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.6 ದಿಂಡುಗಲ್ಲನ್ನು ನೋಡಿ ಗುರುತಿಸುತ್ತಾರೆ. ಆರೋಪಿತರ ಕೈಯಲ್ಲಿ ಇದ್ದ ದೊಣ್ಣೆ ಮತ್ತು ಕುಡುಗೋಲನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತ್ತು 2 ದೊಣ್ಣೆಗಳನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ

ಮು.ಮಾ.3 ಮಚ್ಚು, ಮು.ಮಾ.4 ಮತ್ತು 5 ಮರದ ಹಿಡಿಕೆ ಇರುವ ಕುಡುಗೋಲುಗಳನ್ನು ನೋಡಿ ಗುರುತಿಸಿದ್ದಾರೆ. ಪೊಲೀಸರು ಘಟನೆಯಾದ ಮರುದಿವಸ ನನ್ನನ್ನು ಕರೆಸಿಕೊಂಡಿದ್ದರು. 5-6 ದಿವಸಗಳ ನಂತರ ಮತ್ತೆ ಪೊಲೀಸರು ಬಂದು ಸಹಿ ಮಾಡು ಅಂತ ಠಾಣೆಗೆ ಕರೆಸಿಕೊಂಡಿದ್ದರು. ಈಗ ನನಗೆ ತೋರಿಸಿದ ನಿಪಿ.11 ಮಹಜರ್ ನಲ್ಲಿ ನನ್ನ ರುಜು ಇದೆ. ಅದನ್ನು ನಿಪಿ.11(ಬಿ) ಎಂದು ಗುರುತಿಸಲಾಯಿತು. ಪೊಲೀಸ್ ಠಾಣೆಯಲ್ಲಿ ನಾನು ಮತ್ತು ತಿರುಮಲ ಒಂದು ದಿನ ಠಾಣೆಗೆ ಹೋಗಿದ್ದೆವು. ಪೊಲೀಸರು ಚಾಸಾ.4 ಶರತ್ ಅನ್ನು ಸಹಾ ಠಾಣೆಗೆ ಕರೆಸಿಕೊಂಡು ಸಹಿ ಮಾಡಿಸಿಕೊಂಡಿದ್ದರು. ನಾವು ಬೆಳಗ್ಗೆ 7.30 ಯಿಂದ 8.00 ಗಂಟೆ ಸಮಯದಲ್ಲಿ ಪೊಲೀಸ್ ಠಾಣೆಗೆ ಹೋಗಿದ್ದೆ. ಪೊಲೀಸರು ಪೊಲೀಸ್ ಠಾಣೆಯಲ್ಲಿ ತಿರುಮಲ ಕೊಟ್ಟಿದ್ದ ಚಾಸಾ.2 ಮತ್ತು ತಿರುಮಲ ರವರ ಬಟ್ಟೆಯನ್ನು ನನಗೆ ತೋರಿಸಿ ನನ್ನ ಸಹಿಯನ್ನು ಹಾಕಿಸಿಕೊಂಡಿದ್ದರು. ಗಲಾಟೆಯಾಗಿದ್ದಾಗ ತಿರುಮಲ ಮತ್ತು ಸ್ವಾಮಿಯವರು ಹಾಕಿಕೊಂಡಿದ್ದ ಬಟ್ಟೆಗಳು ಆಗಿತ್ತು. ಸ್ವಾಮಿಯವರು ಒಂದು ಬನಿಯನ್ ಮತ್ತು ಪ್ಯಾಂಟ್, ತಿರುಮಲರವರದು ಕೆಂಪು ಶರ್ಟು, ಬನಿಯನ್ ಮತ್ತು ನಿಕ್ಕರ್ ಆಗಿತ್ತು. ಸದರಿ ಬಟ್ಟೆಗಳಿಗೆ ರಕ್ತ ಆಗಿತ್ತು . ಪೊಲೀಸರು ತಿರುಮಲ ಕೊಟ್ಟಿದ್ದ ಬಟ್ಟೆಗಳನ್ನು ತೆಗೆದುಕೊಂ ಡು ನಮ್ಮ ಸಹಿಯನ್ನು ಹಾಕಿಸಿಕೊಂಡರು. ತಿರುಮಲ ಪೊಲೀಸರಿಗೆ ಕೊಟ್ಟಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.10 ಸ್ಯಾಂಡೋ ಬನಿಯನ್ ಅನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.11 ಪ್ಯಾಂಟ್ ಅನ್ನು ನೋಡಿ ಗುರುತಿಸಿದ್ದಾರೆ. ಮು.ಮಾ.10 ಮತ್ತು 11 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ಸಾಕ್ಷಿಯು ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.10(ಎ) ಹಾಗೂ 11(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.13 ಕೆಂಪು ಬಣ್ಣದ ಟೀ ಶರ್ಟನ್ನು ನೋಡಿ ಗುರುತಿಸಿರುತ್ತಾರೆ. ಹಾಗೂ ಮು.ಮಾ.13 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ಸಾಕ್ಷಿಯು ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.13(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.9 ಸ್ಯಾಂಡೋ ಬನಿಯನ್ ಅನ್ನು ನೋಡಿ ಗುರುತಿಸಿದ್ದಾರೆ. ಮು.ಮಾ.9 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ಸಾಕ್ಷಿಯು ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.9(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ತಿರುಮಲ ರವರ ಪ್ಯಾಂಟನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.15 ಎಂದು ಗುರುತಿಸಲಾಯಿತು. ಮು.ಮಾ.15 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ಸಾಕ್ಷಿಯು ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.15(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ನಿಪಿ.12 ಮತ್ತು ನಿಪಿ.13 ಫೋಟೋದಲ್ಲಿ ನಾನು ಇಲ್ಲ. ಈಗ ನನಗೆ ತೋರಿಸಿ ನಿಪಿ.14 ಮತ್ತು ನಿಪಿ.15 ಫೋಟೋದಲ್ಲಿ ಶರತ್, ನಾನು ಮತ್ತು ಪೊಲೀಸರು ಇದ್ದೇವೆ. ಸದರಿ ನಿಪಿ.14 ಮತ್ತು 15 ಫೋಟೋದಲ್ಲಿ ಪೊಲೀಸ್ ಠಾಣೆಯಲ್ಲಿ ಬಟ್ಟೆಯನ್ನು ಪೊಲೀಸರ ಕೈಗೆ ಕೊಡುತ್ತಿರುವುದು.

<u>ಪಾಟೀ ಸವಾಲುಃ</u> ಆರೋಪಿಗಳ ಪರ ಶ್ರೀ ಬಿ.ಆರ್.ವಿ.ವಕೀಲರು, ಪಾಟೀ ಸವಾಲನ್ನು ಮದ್ಯಾಹ್ಣ 2.45 ಗಂಟೆಗೆ ಮಾಡುವುದಾಗಿ ಸೂಚಿಸಿದ್ದರ ಮೇರೆಗೆ, ಮದ್ಯಾಹ್ಣದ ಅವಧಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

<u>ದಿನಾಂಕಃ 06.09.2021 ರಂದು ಮದ್ಯಾಹ್ಣ ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋದಿಸಲಾಗಿದೆ</u>

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಬಿ.ಆರ್.ವಿ.ವಕೀಲರಿಂದಃ</u>

ನಾನು ವಾಸ ಇರುವುದು14 ನೇ ಕ್ರಾಸ್ ಚಾಮುಂಡೇಶ್ವರಿ ನಗರದಲ್ಲಿ. ಆ ದಿವಸ ನಾನು 8.00 ಗಂಟೆಗೆ ಮನೆಯನ್ನು ಬಿಟ್ಟಿದೆನು. 3 ನೇ ಕ್ರಾಸ್ ನಲ್ಲಿ ಇದ್ದ ಆಸ್ಪತ್ರೆ ಬಳಿ ಬಂದಾಗ 8.00 ಗಂಟೆ ಆಗಿತ್ತು. ನಾನು ಬಿಸ್ ನೆಸ್ ಮಾಡುತ್ತಿದ್ದು ಆಸ್ಪತ್ರೆ ಪಕ್ಕದಲ್ಲಿ ಕಟ್ಟಡವನ್ನು ಕಟ್ಟುತ್ತಿದ್ದರು, ಅಲ್ಲಿಗೆ ಜಲ್ಲಿ ಮರಳನ್ನು ಹೊಡೆಯಲು ಹೋಗಿದ್ದೆನು. ನಾನು ಆ ದಿವಸ ಆಸ್ಪತ್ರೆ ಹತ್ತಿರ ಇದ್ದೆನು. ಆಸ್ಪತ್ರೆ ಪಕ್ಕ

ಕಟ್ಟುತ್ತಿದ್ದ ಕಟ್ಟಡ ನಮ್ಮ ಊರಿನವರದಾಗಿತ್ತು. ನಾನು ಕಳುಹಿಸಿದ್ದ ಲೋಡ್ 8.00 – 8.15 ಗಂಟೆಗೆ ಬಂದಿತ್ತು. 4-5 ವರ್ಷಗಳಿಂದ ನನಗೆ ಚಾಸಾ.2 ರವರ ಪರಿಚಯ ಇದೆ. ನಾನು ಮತ್ತು ಚಾಸಾ.2 ಇಬ್ಬರು, ಎಲ್ಲಾ ವಹಿವಾಟುಗಳನ್ನು ನಡೆಸುತ್ತಿದ್ದೇವೆ ಎಂದರೆ ಸಾಕ್ಷಿಯು ನನ್ನ ವಹಿವಾಟನ್ನು ನಾನು ನಡೆಸುತ್ತೇನೆ, ಅವರ ವಹಿವಾಟನ್ನು ಅವರು ನಡೆಸುತ್ತಾರೆ ಎಂದು. ಚಾಸಾ.2 ರವರು ಮಾರಾಟ ಮಾಡಿರತಕ್ಕಂತಹ ಆಸ್ತಿಯ ಕಾಗದ ಪತ್ರಗಳಿಗೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ಚಾಸಾ.2 ಸ್ವಾಮಿಯವರು ಬರೆದುಕೊಟ್ಟಿದಂತಹ ಹಕ್ಕು ನಿವೃತ್ತಿ ಪತ್ರಕ್ಕೆ ಸಹಾ ನಾನು ಸಾಕ್ಷಿಯಾಗಿ ಸಹಿ ಹಾಕಿದ್ದೇನೆ ಎಂದರೆ ಸರಿ. 8.30 ಯಿಂದ 8.45 ಗಂಟೆ ಒಳಗೆ ಗಲಾಟೆಯಾಗುತ್ತಿದ್ದ ವಿಷಯ ನನಗೆ ಗೊತ್ತಾಯಿತು. ನಾನು 3 ನೇ ಕ್ರಾಸ್ ನಲ್ಲಿ ಆಸ್ಪತ್ರೆ ಬಳಿ ಇದ್ದಂತಹ ಸ್ಥಳದಿಂದ ಘಟನೆ ನಡೆದಂತ ಸ್ಥಳಕ್ಕೆ 300 ಮೀಟರ್ ದೂರ ಇತ್ತು. ಒಂದು ರಸ್ತೆಯನ್ನು ದಾಟಿಕೊಂಡು ಘಟನೆ ನಡೆದಂತ ಸ್ಥಳಕ್ಕೆ ಹೋಗಬೇಕಿತ್ತು ಎಂದರೆ ಸಾಕ್ಷಿಯು , ನಾನು ನಿಂತಿದ್ದ ಸ್ಥಳದಿಂದ ಘಟನೆ ನಡೆದ ಸ್ಥಳ ಕಾಣಿಸುತ್ತಿತ್ತು ಎಂದು ನುಡಿಯುತ್ತಾರೆ. ನಾನು ನಿಂತಿದ್ದ ಜಾಗದ ಅಕ್ಕಪಕ್ಕದಲ್ಲಿ ಮರಿಗೌಡ ಕಾಲೇಜು ಮತ್ತು ದೊಡ್ಡ ವಾಟರ್ ಟ್ಯಾಂಕ್ ಇದೆ ಎಂದರೆ ಸರಿ. ಮರಿಗೌಡ ಕಾಲೇಜಿನ ದೊಡ್ಡ ಎತ್ತರವಾಗಿರುವ ಕಾಂಪೌಂಡ್ 2 ನೇ ಕ್ರಾಸ್ ಗೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ನಾನು ನಿಂತಿದ್ದ ಸ್ಥಳದಿಂದ ಘಟನಾ ಸ್ಥಳಕ್ಕೆ ಸುಮಾರು 500 ರಿಂದ 600 ಮನೆಗಳು ಇದೆ ಎಂದರೆ ಸರಿ. ಅಲ್ಲಿ ಇದ್ದ ಮನೆಗಳು 2 ಫ್ಲೋರ್ , 3 ಫ್ಲೋರ್ , 4 ಫ್ಲೋರ್ ಇರುವ ಮನೆಗಳು ಎಂದರೆ ಸರಿ. 2 ನೇ ಕ್ರಾಸ್ ಮನೆಯಲ್ಲಿ 6 ನೇ ಆರೋಪಿ ಮತ್ತು ಅವರ ಹೆಣ್ಣು ಮಕ್ಕಳು ವಾಸ ಇದ್ದಾರೆ. 6 ನೇ ಆರೋಪಿ ಹಾಗೂ ಹಿರಿಯ ಮಗಳಾದ ಲಕ್ಷ್ಮಮ್ಮ ವಾಸ ಇದ್ದಾರೆ. 6 ನೇ ಆರೋಪಿಯ ಮಗ ಹಾಗೂ ಉಳಿದ ಹೆಣ್ಣು ಮಕ್ಕಳು ಬಂದು ಹೋಗಿ ಮಾಡಿಕೊಂಡಿರುತ್ತಾರೆ. ನಾನು ಗಲಾಟೆ ನಡೆದ ಸ್ಥಳಕ್ಕೆ ಹೋಗುವಷ್ಟರಲ್ಲಿ ಅಲ್ಲಿ 8 ರಿಂದ 10 ಜನರು ನಿಂತಿದ್ದರು. ಅಲ್ಲಿ ಗಲಾಟೆಯನ್ನು ಯಾರು ಬಿಡಿಸುತ್ತಿರಲಿಲ್ಲ. ನಾನು ನೋಡಿದಾಗ ಚಾಸಾ.1 ತಿರುವಲ ಕೆಳಗಡೆ ನಿಂತಿದ್ದರು. ಘಟನೆ ನಡೆದ ಸ್ಥಳದ ಅಕ್ಕಪಕ್ಕದಲ್ಲಿ ಮನೆಗಳು ಇತ್ತು. ಆ ಮನೆಯವರು ಯಾರು ಆಚೆ ಬರಲಿಲ್ಲ. ನಾನು ಈಗ ನ್ಯಾಯಾಲಯದ ಸಾಕ್ಷಿ ಕಟ್ಟೆಯಲ್ಲಿಯಾವ ದಿಕ್ಕಿನಲ್ಲಿ ನಿಂತಿದ್ದೆನೋ ಅದೇ ದಿಕ್ಕಿನಲ್ಲಿ ಘಟನೆ ಸ್ಥಳದಲ್ಲಿ ನಿಂತಿದ್ದೆನು. ಘಟನೆ ನಡೆದಂತ ಸ್ಥಳವು , ಸಾರ್ವಜನಿಕರು ಓಡಾಡುವ ರಸ್ತೆಯಾಗಿತ್ತು ಎಂದರೆ ಸರಿ. ನಾನು ಮನೆಯ ಹತ್ತಿರ ಇದ್ದ ರಸ್ತೆಯಲ್ಲಿ ನಿಂತಿದ್ದೆನು. ನಾನು ನಿಂತಿದ್ದ ಆಸ್ಪತ್ರೆ ಜಾಗದಿಂದ, ಘಟನಾ ಸ್ಥಳಕ್ಕೆ ಬರುವಾಗ, ಮಧ್ಯದಲ್ಲಿ ಯಾರನ್ನು ಬೇಟಿ ಮಾಡಿರಲಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದ ನಂತರ ಚಾಸಾ.4 ಶರತ್ ಅಲ್ಲಿಗೆ ಬಂದರು. ಚಾಸಾ.4 ಶರತ್ ಗಲಾಟೆಯನ್ನು ಬಿಡಿಸಲಿಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಉಲ್ಲೇಖಿಸಿರುವ ಆಟೋವು , ರಸ್ತೆಯಲ್ಲಿ ಹೋಗುತ್ತಿದ್ದ ಆಟೋವಾಗಿತ್ತು. ಚಾಸಾ.1 ಮತ್ತು 2 ಗಾಯಾಳುವನ್ನು ನಾನು, ಚಾಸಾ.4 ಮತ್ತು ಚಾಸಾ.3 ಆಟೋಗೆ ಹತ್ತಿಸಿದೆವು.

ನಂತರ ನಾನು ಆಟೋ ಹಿಂದೆ ಸ್ಕೂಟರ್ ನಲ್ಲಿ ಹೋದೆನು. ಚಾಸಾ.2 ಸ್ವಾಮಿಯನ್ನು ಆಟೋದಲ್ಲಿ ಹಾಕುವ ಕಾಲಕ್ಕೆ ಅವರಿಗೆ ಪ್ರಜ್ಞೆ ಇರಲಿಲ್ಲ. ಚಾಸಾ.2 ಗಾಯಾಳುವಿನ ರಕ್ತವು, ನಮಗೆ ಸಣ್ಣಪುಟ್ಟದಾಗಿ ತಗುಲಿತ್ತು. ಪೊಲೀಸರು ರಕ್ತ ಕಲೆಯಾಗಿದ್ದ ನಮ್ಮ ಬಟ್ಟೆಯನ್ನು ನೋಡಿದರು, ನಮ್ಮ ಬಟ್ಟೆಯನ್ನು ಪೊಲೀಸರು ಕೇಳಲಿಲ್ಲ.

ಚಾಸಾ.3 ಮತ್ತು ಚಾಸಾ.4, ಚಾಸಾ.1 ಮತ್ತು 2 ಗಾಯಾಳುಗಳ ಜೊತೆ ಆಟೋದಲ್ಲಿ ಹೋದರು. ನಾನು ಆಟೋದಲ್ಲಿ ಹೋಗಲಿಲ್ಲ. ಆಟೋ ಹಿಂದೆ ಸ್ಕೂಟರ್ ನಲ್ಲಿ ಹೋದೆನು. ಆಸ್ಪತ್ರೆಯಲ್ಲಿ ಘಟನೆ ಬಗ್ಗೆ ಚಾಸಾ.1 , ಚಾಸಾ.3 ಮತ್ತು ಚಾಸಾ.4 ಹೇಳಿದರು . ಚಾಸಾ.2 ರವರಿಗೆ ಪ್ರಜ್ಞೆ ಇರಲಿಲ್ಲ, ಮಾತು ಇರಲಿಲ್ಲ. ನಾನು ಆಸ್ಪತ್ರೆಗೆ ಹೋಗಿದ್ದಾಗ ಪೊಲೀಸರು ಅಲ್ಲಿಗೆ ಬಂದಿರಲಿಲ್ಲ. ಪೊಲೀಸರು ನನ್ನನ್ನು 3 ದಿವಸದ ನಂತರ ಕರೆಸಿದ್ದರು. ಪೊಲೀಸರು ನನಗೆ ಪೊಲೀಸ್ ನೋಟೀಸನ್ನು ಕೊಟ್ಟಿರಲಿಲ್ಲ. ಆಸ್ಪತ್ರೆಗೆ ಹೋದಾಗಲೇ, ಆಸ್ಪತ್ರೆಯಿಂದ ಪೊಲೀಸರಿಗೆ ಕಂಪ್ಲೆಂಟ್ ಕೊಟ್ಟಿದ್ದರು. ಆಸ್ಪತ್ರೆಯಲ್ಲಿ ಚಾಸಾ.1 ಪೊಲೀಸರಿಗೆ ದೂರನ್ನು ಕೊಟ್ಟಿದ್ದರು, ಆಗ ಚಾಸಾ.3 ಮತ್ತು 4 ಸಹಾ ಆಸ್ಪತ್ರೆಯಲ್ಲಿ ಇದ್ದರು. ಚಾಸಾ.1 ರವರ ದೂರನ್ನು ಪೊಲೀಸರು ಬರೆದುಕೊಂಡರು, ದೂರನ್ನು ಬರೆದುಕೊಂಡಿದ್ದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಕಂಪ್ಲೆಂಟ್ ಗೆ ಚಾಸಾ.1, 3 ಮತ್ತು 4 ಸಹಿ ಮಾಡಿದರು. ಕಂಪ್ಲೆಂಟನ್ನು ಪೊಲೀಸರು ಓದಿ ಹೇಳಲಿಲ್ಲ. ಘಟನೆಯಾದ ಮಾರನೆಯ ದಿವಸಕ್ಕೆ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಮಾರನೆಯ ದಿವಸ ನಾನು ಪೊಲೀಸ್ ಠಾಣೆಗೆ ಹೋಗಿದ್ದಾಗ, ರಕ್ತ ಸಿಕ್ತ ಆಗಿದ್ದ ಬಟ್ಟೆಗಳನ್ನು ನನಗೆ ತೋರಿಸಿ ಬರವಣಿಗೆ ಮಾಡಿಕೊಂಡಿದ್ದರು. ಬರವಣಿಗೆಯನ್ನು ಪೊಲೀಸರು ನನಗೆ ಓದಿ ಹೇಳಲಿಲ್ಲ. ಬರವಣಿಗೆಗೆ , ಪೊಲೀಸರು ನನಗೆ ಸಾಕ್ಷಿಯಾಗಿ ಸಹಿ ಮಾಡು ಅಂದರು, ನಾನು ಸಹಿ ಮಾಡಿದೆನು, ನಾನಲ್ಲದೆ ಬರವಣಿಗೆಗೆ, ಚಾಸಾ.1, 3 ಮತ್ತು 4 ಸಹಾ ಸಹಿ ಮಾಡಿದ್ದಾರೆ. ನಾನು ಆಸ್ಪತ್ರೆಯಲ್ಲಿ ಇದ್ದುದರಿಂದ ಬಟ್ಟೆಗಳನ್ನು ಪೊಲೀಸ್ ಠಾಣೆಗೆ ಯಾರು ತಂದು ಕೊಟ್ಟಿದ್ದರು ಅಂತ ಗೊತ್ತಿಲ್ಲ. ಚಾಸಾ.4, ಆಸ್ಪತ್ರೆಯಿಂದ ಪೊಲೀಸರಿಗೆ ಬಟ್ಟೆಯನ್ನು ತಂದು ಕೊಟ್ಟಿದ್ದರು, ಇದನ್ನು ನಾನು ನೋಡಿಲ್ಲ. 1 ನೇ ಆರೋಪಿ, ಚಾಸಾ.2 ರವರ ತಲೆಯ ಮೇಲೆ ಕಲ್ಲನ್ನು ಎತ್ತಿಹಾಕಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ , ಚಾಸಾ.1 ರವರಿಗೆ ದೊಣ್ಣೆಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ, ನಾನು ಗಲಾಟೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಗಲಾಟೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ.6 ದಿಂಡುಗಲ್ಲು, ಮು.ಮಾ.1 ಮತ್ತು 2 ದೊಣ್ಣೆಗಳ ಮೇಲೆ , ಯಾವುದೇ ನಿಖರವಾದ ಗುರುತನ್ನು ನಾನು ಇಟ್ಟುಕೊಂಡಿರುವುದಿಲ್ಲ. ಅದೇ ರೀತಿ ಉಳಿದ ಮುದ್ದೆ ಮಾಲುಗಳಿಗೂ ಸಹಾ ನಾನು ಯಾವುದೇ ವಿಶೇಷವಾದ ಗುರುತನ್ನು ಇಟ್ಟುಕೊಂಡಿರುವುದಿಲ್ಲ.

ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ನಾನು ಇದೇ ಮೊದಲನೇ ಬಾರಿಗೆ ಕೋರ್ಟ್ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.